## ಪಾದರಸದ ಶಿವಲಿಂಗ

ಪಾರದ್ ಶಿವಲಿಂಗ್ ಅರ್ಥಾತ್ ಪಾದರಸದ ಶಿವಲಿಂಗವು ಹರಿದ್ವಾರದ ಕಂಕಲ್‌ನ ಶ್ರೀ ಪಾರದೇಶ್ವರ ಮಹಾದೇವ ಮಂದಿರದಲ್ಲಿದೆ. ಸಾಧಾರಣವಾಗಿ ದ್ರವರೂಪದಲ್ಲಿರುವ ಪಾದರಸ ಘನರೂಪದಲ್ಲಿರುವುದು ಇದರ ವಿಶೇಷ. ಈ ಶಿವಲಿಂಗದ ತೂಕ 150 ಕೆಜಿ. ಈ ಶಿವಲಿಂಗಕ್ಕೆ ಅಭಿಷೇಕ ನಡೆಯುವುದು ಶಿವರಾತ್ರಿಯಂದು ಮಾತ್ರ!

**-ಮಂಜುನಾಥ. ಡಿ.ಎಸ್., ಬೆಂಗಳೂರು**





## ಕುರಿಯ ಮೇಲೆ ರಾಯಣ್ಣ!

ವಿಜಯಪುರ ಜಿಲ್ಲೆಯ ವಿಜಯಪುರ ತಾಲೂಕಿನ ನಡೋಣಿ ಗ್ರಾಮದ ಕೆರಪ್ಪ ಭೀಮಣ್ಣ ಧನಗೊಂಡ ಎಂಬ ಅದ್ಭುತ ಕಲಾವಿದ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ಅಭಿಮಾನಿ. ಕುರಿಯ ಕೂದಲನ್ನು ತೆಗೆಯುತ್ತಾ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ಚಿತ್ರ ಬಿಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.

**-ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ**

## ಪುರಾತನ ಇಳಿಜಾರು

ನನ್ನ ತಂದೆ ಎಚ್. ಸುಬ್ಬರಾವ್ ಹಾಗೂ ತಾತ ಎಚ್.ಕೃಷ್ಣರಾವ್ ಇಬ್ಬರೂ ಮೈಸೂರಿನಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದರು. ಮನೆಯಲ್ಲೇ ಕಚೇರಿ ಇತ್ತು. ಕಾಗದ ಪತ್ರಗಳನ್ನು ಇಡಲು, ಫೈಲ್‌ಗಳನ್ನು, ಕವರ್‌ಗಳನ್ನು, ಬಿಳಿ ಹಾಳೆಗಳನ್ನು ಪ್ರತ್ಯೇಕವಾದ ಸ್ಥಳಗಳಲ್ಲಿ ಇಟ್ಟುಕೊಳ್ಳಲು ಒಂದು ಮರದ ಪುಟ್ಟ ಕಪಾಟು ಮಾಡಿಸಿದ್ದರು. ಆ ಅಮೂಲ್ಯ ವಸ್ತು ನಮ್ಮ ಮನೆಯಲ್ಲಿ ಈಗಲೂ ಇದೆ. ಅದನ್ನು 'ಇಳಿಜಾರು' ಎಂದು ಕರೆಯುತಿದ್ದರು. ಅದಕ್ಕೆ ಸುಮಾರು 150 ವರ್ಷಕ್ಕೂ ಹೆಚ್ಚು ವಯಸ್ಸಾಗಿದೆ. ಮನೆಗೆ ಬಂದವರ ದೃಷ್ಟಿ ಮೊದಲು ಹೋಗುವುದು ಈ ಪುರಾತನ ವಸ್ತುವಿನ ಮೇಲೆ.

**-ಕೃಷ್ಣ ಸುಬ್ಬರಾವ್, ಬೆಂಗಳೂರು**

